**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 231/2022

**ಸಾಕ್ಷಿಯನ್ನು ದಿನಾಂಕ 26.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರಸನ್ನಕುಮಾರ | ಪಿ.ಡಬ್ಲ್ಯೂ-19 |
| ತಂದೆಯ/ಗಂಡನ ಹೆಸರು | : | ಎಂ.ಮುನಿಯಪ್ಪ | ಸಿ.ಡಬ್ಲ್ಯೂ-32 |
| ವಯಸ್ಸು | : | 53 | |
| ಉದ್ಯೋಗ | : | ಎ.ಇ.ಇ,<br>ಕೆ.ಆರ್.ಐ.ಡಿ.ಎಲ್<br>ಗುಂಡ್ಲುಪೇಟೆ | |
| ವಾಸ ಸ್ಥಳ | : | ಮೈಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಆಗಸ್ಟ 2018 ರಿಂದ ಫೆಬ್ರವರಿ 2023 ರವರೆಗೆ ಮೈಸೂರಿನ ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ ಕಛೇರಿಯಲ್ಲಿ ಸಹಾಯಕ ಇಂಜನಿಯರ್ ಆಗಿ ಕೆಲಸ ಮಾಡಿರುತ್ತೇನೆ. ದಿನಾಂಕ 26.10.2021 ರಂದು ನಮ್ಮ ಕಛೇರಿಗೆ ಹೆಬ್ಬಾಳ ಪೊಲೀಸ್ ಠಾಣೆಯಿಂದ ಕ್ರೈಂ ನಂ.59/2021 ಪ್ರಕರಣದಲ್ಲಿನ ಕೃತ್ಯ ಸ್ಥಳದ ನಕಾಶೆ ತಯಾರಿಸಿಕೊಡುವಂತೆ ಪತ್ರ ಬಂದಿತ್ತು. ದಿನಾಂಕ

17.11.2021 ರಂದು ನಾನು ಆ ಸ್ಥಳಕ್ಕೆ ಭೇಟಿ ನೀಡಿದ್ದೆ. ಆ ಕಾಲಕ್ಕೆ ತನಿಖಾ ಸಹಾಯಕರಾದ ಶ್ರೀಧರ ಎಂ.ಆರ್ ಸಿ.ಹೆಚ್.ಸಿ 383 ಇವರು ನನಗೆ ಘಟನೆ ಸ್ಥಳ ತೋರಿಸಿದರು. ಆಗ ನಾನು ಘಟನೆ ಸ್ಥಳದ ನಕಾಶೆ ತಯಾರಿಸಿಕೊಟ್ಟಿದ್ದೆ. ಘಟನೆ ನಡೆದಿದ್ದ ರೂಂ 2 ನೇ ಮಹಡಿಯಲ್ಲಿತ್ತು. ಈಗ ನಾನು ನೋಡುತ್ತಿರುವ ನಕಾಶೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ನಕಾಶೆಯನ್ನು ತನಿಖಾಧಿಕಾರಿ ಪತ್ರ ಮತ್ತು ಕವರಿಂಗ್ ಲೆಟರಿನೊಂದಿಗೆ ನಿಪಿ28 ಎಂದು, ಸಹಿಯನ್ನು ನಿಪಿ28 ಎ ಎಂದು ಗುರುತಿಸಿದೆ. 2 ನೇ ಮಹಡಿಯ ಘಟನೆ ನಡೆದ ಸ್ಥಳದ ರೂಂನ ಪೂರ್ವ ಗೋಡೆಯಲ್ಲಿ ಬಾಗಿಲು ಮತ್ತು ಕಿಟಕಿ ಇವೆ. ಕೃತ್ಯ ನಡೆದ ಸ್ಥಳ ರೂಂ ಒಳಗಡೆ ಇತ್ತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್.ಎನ್.ಆರ್ ವಕೀಲರಿಂದಃ**

ನಾನು ಆ ಕಟ್ಟಡದ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಮಧ್ಯಾಹ್ನ 12.30 ಕ್ಕೆ ನಾನು ಆ ಸ್ಥಳಕ್ಕೆ ಭೇಟಿ ನೀಡಿದ್ದೆ. ಅಂದಾಜು 2.30 ಕ್ಕೆ ನಕಾಶೆ ತಯಾರಿ ಕೆಲಸ ಮುಗಿದಿತ್ತು. ವರದಿಯಲ್ಲಿ ಸಮಯದ ಕುರಿತು ನಮೂದಿಲ್ಲ. ವರದಿಯಲ್ಲಿ ಮನೆಯ ಪೂರ್ಣ ಅಳತೆ ಕುರಿತು ನಮೂದಿಲ್ಲ. ನಕಾಶೆ ತಯಾರಿಸುವ ಕಾಲಕ್ಕೆ ಲ್ಯಾಪಟಾಪ್ ಅಥವಾ ಕಂಪ್ಯೂಟರನ್ನು ತೆಗೆದುಕೊಂಡು ಹೋಗಿಲ್ಲ. ಕಿಟಕಿ ಅಳತೆಯ ಬಗ್ಗೆ ನಮೂದಿಲ್ಲ ಎಂದರೆ ನಿಜ. ಆ ಕಟ್ಟಡದ ಪೂರ್ವಕ್ಕೆ ಲಿಖಿತ ನಿಲಯ, ಪಶ್ಚಿಮಕ್ಕೆ ಕಾಂಪೌಂಡ್ ಗೋಡೆ, ಉತ್ತರಕ್ಕೆ ಕಾಂಕ್ರಿಟ್ ರಸ್ತೆ, ದಕ್ಷಿಣಕ್ಕೆ ಖಾಸಗಿ ಆಸ್ತಿ ಇದೆ. ಆ

ರೂಂನಲ್ಲಿ ಏನೇನು ಇತ್ತು ಎಂದು ವರದಿಯಲ್ಲಿ ನಮೂದಿಸಿಲ್ಲ. ಪೋಲಿಸರ ಹೇಳಿಕೆಯಂತೆ ಠಾಣೆಯಲ್ಲಿ ತಯಾರಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು